
# 'ಶ್ರೀರಾಮಕೃಷ್ಣ ವಚನವೇದ' ಭಾವಧಾರೆ - 25

**ಸ್ವಾಮಿ ನಿತ್ಯಸ್ಥಾನಂದ**



### ಭಗವಂತನ ಪ್ರವೇಶ

ಶ್ರೀರಾಮಕೃಷ್ಣರು ಮುಂದುವರಿದು ಹೇಳುತ್ತಾರೆ:

''ಮೊದಲು ಹೃದಯದಲ್ಲಿ ಭಗವಂತನನ್ನು ಪ್ರತಿಷ್ಠಾಪನೆ ಮಾಡಿಕೊಳ್ಳಿ. ಬಳಿಕ ಇಚ್ಛೆಯಾದರೆ ಲೆಕ್ಚರ್ ಮಾಡಿ. ವಿವೇಕ-ವೈರಾಗ್ಯ ಗಳಿಸಿಕೊಳ್ಳದೆ ಕೇವಲ 'ಬ್ರಹ್ಮ, ಬ್ರಹ್ಮ' ಅಂತ ಹೇಳು ತ್ತಿದ್ದರೆ ಏನು ದೊರತೀತು? ಅದು ಬರಿ ಶಂಖಧ್ವನಿ ಮಾತ್ರ.

''ಒಂದು ಹಳ್ಳಿಯಲ್ಲಿ ಪದ್ಮಲೋಚನ ಎಂಬ ಒಬ್ಬ ಹುಡುಗ ಇದ್ದ. ಜನರು ಆತನನ್ನು 'ಪೋದೊ, ಪೋದೊ' ಎಂಬುದಾಗಿ ಕರೆಯುತ್ತಿದ್ದರು. ಅದೇ ಹಳ್ಳಿಯಲ್ಲಿ ಒಂದು ಶಿಥಿಲವಾದ ದೇವಾಲಯವಿತ್ತು. ಒಳಗೆ ವಿಗ್ರಹವೇ ಇರಲಿಲ್ಲ. ಅದರ ಗೋಡೆಗಳ ಮೇಲೆ ಅಶ್ವತ್ಥವೃಕ್ಷ ಮತ್ತು ಇನ್ನೂ ಏನೇನೋ ಗಿಡಮರಗಳು ಬೆಳೆದುಕೊಂಡಿದ್ದವು. ದೇವಾಲಯದ ಒಳಗೆ ಬಾವಲಿ ಹಕ್ಕಿಗಳು ವಾಸವಾಗಿದ್ದವು. ನೆಲ ಅವುಗಳ ಹಿಕ್ಕೆ ಮತ್ತು ಧೂಳಿನಿಂದ ತುಂಬಿತ್ತು. ಅಲ್ಲಿಗೆ ಯಾರೂ ಹೋಗುತ್ತಿರಲಿಲ್ಲ. ಒಂದು ದಿನ ಮುಸ್ಸಂಜೆಯಾದ ಮೇಲೆ ಆ ದೇವಾಲಯದ ಕಡೆಯಿಂದ ಶಂಖ ಧ್ವನಿ ಬರಲಾರಂಭಿಸಿತು. ಹಳ್ಳಿಯ ಜನರು ಭಾವಿಸಿದರು, ಬಹುಶಃ ದೇವಾಲಯದಲ್ಲಿ ಯಾರೋ ದೇವರನ್ನು ಪ್ರತಿಷ್ಠೆ ಮಾಡಿರಬೇಕು, ಸಾಯಂ ಮಂಗಳಾರತಿ ನಡೆಯುತ್ತಿದೆ. ಮಕ್ಕಳು ಮರಿ, ಗಂಡಸರು, ಹೆಂಗಸರು, ದೊಡ್ಡವರು, ಚಿಕ್ಕವರು ಎಲ್ಲರೂ ದೇವಾಲಯದ ಕಡೆಗೆ ಓಡಿಬಂದರು. ಅವರಲ್ಲಿ ಒಬ್ಬ ಮೆತ್ತಗೆ ಬಾಗಿಲು ತಳ್ಳಿ ನೋಡುತ್ತಾನೆ, ಪದ್ಮಲೋಚನ ಒಂದು ಕಡೆ ನಿಂತುಕೊಂಡು 'ಭ್ಞೋ, ಭ್ಞೋ' ಅಂತ ಶಂಖ ಊದುತ್ತಿದ್ದಾನೆ. ದೇವರನ್ನು ಪ್ರತಿಷ್ಠೆ ಮಾಡಿಲ್ಲ, ನೆಲವನ್ನು ಗುಡಿಸಿಲ್ಲ, ಸಾರಿಸಿಲ್ಲ, ಹೇರಳವಾಗಿ ಬಾವಲಿ ಹಿಕ್ಕೆ ಬಿದ್ದಿದೆ. ಆಗ ಅವನು ಗಟ್ಟಿಯಾಗಿ ಕೂಗಿ ಪದ್ಮಲೋಚನನಿಗೆ ಹೇಳಿದ:

ಮೂರ್ತಿಯನ್ನು ನಿಲಿಸಿಲ್ಲ  
ಗುಡಿಯ ಪೀಠದಲಿ  
ಆದರೂ ಶಂಖವನು ಊದುತ್ತಿರುವೆ!  
ಈ ಶಂಖನಾದಕ್ಕೆ ಹೆದರಿ ಬಾವಲಿ ಮಾತ್ರ  
ಹಗಲು ಇರುಳು ಸುತ್ತ ಹಾರಾಡಿವೆ!

ಈ ದೇಹವೆಂಬ ಗುಡಿಯೊಳಗೆ ಹನ್ನೊಂದು ಬಾವಲಿಗಳು, ಎಂದರೆ ಏಕಾದಶ ಇಂದ್ರಿಯಗಳು ಹಾರಾಡುತ್ತಿರುತ್ತವೆ. ಪಾಳು ಗುಡಿಯಲ್ಲಿ ಜೇಡರ ಬಲೆಗಳಿರುತ್ತವೆ. ಹಾಗೆಯೇ ಈ ದೇಹ ದೊಳಗೆ ಹಳೆಯ ಸಂಸ್ಕಾರಗಳ ಜಾಲವಿರುತ್ತದೆ (cobwebs). ಇದೂ ಸಾಲದೆಂಬಂತೆ ಈಗ ಅಂತರ್ಜಾಲವಿದೆ (internet), ಜಗಜ್ಜಾಲವಿದೆ (w.w.w& - world wide web) ಬೇಕಾದಷ್ಟು ವೆಬ್‌ಸೈಟ್‌ಗಳಿವೆ, ಆದರೆ insite (insight) ಇಲ್ಲ. ಪಾಳುಗುಡಿ ಯಲ್ಲಿ ಕೆಟ್ಟ ವಾಸನೆ ಇರುತ್ತದೆ, ಹಾಗೆಯೇ ನಮ್ಮಲ್ಲಿ ವಿಷಯ ವಾಸನೆ ಇರುತ್ತದೆ. ಅಂತರಂಗ ಪರಿಶುದ್ಧವಾದರೆ ಭಗವಂತ ಒಳಗೆ ಪ್ರವೇಶಿಸುತ್ತಾನೆ. ಇನ್ನೊಂದು ಅಭಿಪ್ರಾಯದಲ್ಲಿ ಭಗವಂತನು ಒಳ ಪ್ರವೇಶಿಸಿ ಅಹಂಕಾರವನ್ನು ಹೊರಗೆ ತಳ್ಳುತ್ತಾನೆ. ನೀರು ಬಿಂದಿಗೆಯೊಳಗೆ ಹೋಗುವಾಗ ಗಾಳಿಯು 'ಬಕ್ ಬಕ್' ಎಂದು ಹೊರ ನುಗ್ಗುವಂತೆ. ಶ್ರೀರಾಮಕೃಷ್ಣರು ಗಿರೀಶಚಂದ್ರನನ್ನು ಹಾಗೆ ಪ್ರವೇಶಿಸಿದರು. ಜೋರಾಗಿ ಮಳೆ ಬರುತ್ತಿರುವಾಗ ಮನೆ ಯೊಳಗೆ ಆಗಂತುಕನೊಬ್ಬನು ಪ್ರವೇಶಿಸಿದನು. ''ಯಾಕೋ ಬಂದೆ'' ಎಂದು ಕೇಳಿದಾಗ ''ಹೀಗೆ ಬಂದೆ'' ಎಂದು ಕುಳಿತೇ ಬಿಟ್ಟ. ''ಇದೇನು ಕುಳಿತುಬಿಟ್ಟಲ್ಲ!'' ಎಂದು ಕೇಳಿದಾಗ, ''ಹಾಗೆ ಸ್ವಲ್ಪ ವಿಶ್ರಮಿಸಿಕೊಳ್ಳಲಾ?'' ಎಂದು ಹೇಳಿ ಮಲಗಿಯೇ ಬಿಟ್ಟ. ''ನೀವು ಬೇಕಾದರೆ, ಹೋಗಿ; ನಾನು ಇಲ್ಲೇ ಇರುತ್ತೇನೆ''

ಎಂದು ಅಲ್ಲೇ ತಳವೂರಿಬಿಟ್ಟ. ಹಾಗೆಯೇ ದೇವರು ನಮ್ಮನ್ನು ಪ್ರವೇಶಿಸುತ್ತಾನೆ.

## ವಿವೇಕ-ವೈರಾಗ್ಯ

**ಶ್ರೀರಾಮಕೃಷ್ಣರು:** ''ವಿವೇಕ-ವೈರಾಗ್ಯ ಗಳಿಸಿಕೊಳ್ಳದೆ ಭಗವಂತನನ್ನು ಪಡೆಯಲಾಗುವುದಿಲ್ಲ.''

ವಿವೇಕದ ಬಗ್ಗೆ ತಾತ್ತ್ವಿಕ ವಿಚಾರ ಸದ್ಯಕ್ಕೆ ಬೇಡ. ದಿನನಿತ್ಯ ಜೀವನದಲ್ಲಿ ನಾವು ಹೇಗೆ ಇದನ್ನು ಅನುಸರಿಸಬೇಕು?

**ಆಹಾರದ ವಿಷಯದಲ್ಲಿ ವಿವೇಕ:** ಆಹಾರದಲ್ಲಿ ಮೂರು ದೋಷಗಳನ್ನು ಗುರುತಿಸಲಾಗಿದೆ. ಜಾತಿ, ಆಶ್ರಯ ಮತ್ತು ನಿಮಿತ್ತ. ಈ ದೋಷಗಳಿಂದ ಮುಕ್ತವಾಗಿರುವ ಆಹಾರವನ್ನು ಸ್ವೀಕರಿಸಬೇಕು. ತಾಮಸ ಮತ್ತು ರಾಜಸ ಪ್ರವೃತ್ತಿಗಳನ್ನು ವೃದ್ಧಿಸುವ ಆಹಾರಗಳಿಂದ ಆದಷ್ಟೂ ದೂರವಿರುವುದು ಒಳ್ಳೆಯದು. ಯಾರು ಆಹಾರವನ್ನು ತಯಾರಿಸುತ್ತಾರೆ, ನೀಡುತ್ತಾರೆ ಎನ್ನುವುದೂ ಮುಖ್ಯ. ವ್ಯಕ್ತಿಯ ಚಾರಿತ್ರ್ಯವೂ ಆಹಾರದ ಮೇಲೆ ಪ್ರಭಾವ ಬೀರುತ್ತದೆ. ಆದ್ದರಿಂದ ಎಲ್ಲೆಂದರಲ್ಲಿ ಯಾರಿಂದಲಾದರೂ – ಅನಿವಾರ್ಯ ಪರಿಸ್ಥಿತಿಯನ್ನು ಹೊರತು– ಆಹಾರವನ್ನು ಸೇವಿಸಬಾರದು. ಇದು ಆಶ್ರಯದೋಷಕ್ಕೆ ಸಂಬಂಧಿಸಿದುದು. ನಿಮಿತ್ತ ದೋಷ ಎಂದರೆ, ಕೂದಲು, ಉಗುರು, ಮುಂತಾದ ಅಹಿತಕರ ವಸ್ತುಗಳು ಆಹಾರದಲ್ಲಿರುವುದು. ಸಾಂಕ್ರಾಮಿಕ ರೋಗಗಳಿಗೆ ಕಾರಣವಾಗುವ ವಸ್ತುಗಳು. ನೊಣ ಮುಂತಾದ ಕ್ರಿಮಿಕೀಟಗಳೂ ಕೆಲವೊಮ್ಮೆ ಆಹಾರದಲ್ಲಿರುತ್ತವೆ. ಇವೆಲ್ಲ ನಿಮಿತ್ತ ದೋಷ. ಯಾವುದೇ ಆಹಾರವನ್ನು ಭಗವಂತನಿಗೆ ಅರ್ಪಿಸಿ ಸ್ವೀಕರಿಸಿದರೆ ಅದು ಶುದ್ಧವಾಗುತ್ತದೆ. ಎಷ್ಟೇ ಶುದ್ಧವಾದ ಆಹಾರವನ್ನಾದರೂ ನಿಷೇಧಾತ್ಮಕ ಭಾವನೆಯೊಂದಿಗೆ ಸ್ವೀಕರಿಸಿದರೆ ಅದು ಅಶುದ್ಧವಾಗುತ್ತದೆ. ಅಷ್ಟೇ ಅಲ್ಲದೆ ಅದು ಸರಿಯಾಗಿ ಜೀರ್ಣವಾಗದೆ ಅನೇಕ ರೋಗಗಳಿಗೆ ಕಾರಣವಾಗಬಹುದು. ಅದಕ್ಕಾಗಿಯೇ ಭಗವಂತನನ್ನು ನೆನೆದುಕೊಂಡು ಆಹಾರ ಸ್ವೀಕರಿಸಬೇಕೆಂದು ಹೇಳಿರುವುದು. ಒಟ್ಟಿನಲ್ಲಿ ಆಹಾರ ಸ್ವೀಕರಿಸುವಾಗ ಮನಸ್ಸು ಉಲ್ಲಾಸಭರಿತವಾಗಿರಬೇಕು.

ಈಗಿನ ಸಂದರ್ಭದಲ್ಲಿ ನಮಗೆ ಸಾಮಾಜಿಕ ಜಾಲತಾಣದ (Social Media) ವಿಷಯದಲ್ಲಿ ಹೆಚ್ಚು ವಿವೇಕ ಇರಬೇಕಾಗುತ್ತದೆ. ಮೊಬೈಲ್ ಮೂಲಕ ಇಡೀ ಪ್ರಪಂಚ ನಮ್ಮ ಜೇಬಿನಲ್ಲೇ ಇರಬೇಕಾಗಿರುವುದರಿಂದ ನಮಗೆ ಯಾವುದನ್ನು ನೋಡಬೇಕು, ಯಾವುದನ್ನು ನೋಡಬಾರದು, ಯಾವುದನ್ನು ಕೇಳಬೇಕು, ಯಾವುದನ್ನು ಕೇಳಬಾರದು ಎಂಬ ವಿಷಯದಲ್ಲಿ ತುಂಬ ವಿವೇಕಬುದ್ಧಿ ಬೇಕಾಗುತ್ತದೆ. ನಾವು ತುಂಬ ದೂರ ಹೋಗಬೇಕಾಗಿಲ್ಲ, ಇತರರನ್ನು ಅವಲಂಬಿಸಬೇಕಾಗಿಲ್ಲ, ಹೆಚ್ಚು ಖರ್ಚು ಇಲ್ಲ– ಪ್ರಲೋಭನೆಯ ವಿಷಯಗಳು ತುಂಬ ಹತ್ತಿರವಾಗಿಬಿಟ್ಟಿವೆ, ಸುಲಭವಾಗಿ ಎಟುಕುವಂತಾಗಿದೆ. ಆದ್ದರಿಂದ ಬಹುಬೇಗ ಅವುಗಳಿಗೆ ಬಲಿಯಾಗುವ ಸಂಭವವಿದೆ. ಇದರಿಂದ ದೂರವಿರಲು ತೀವ್ರ ವೈರಾಗ್ಯ ಮನೋಭಾವ ಇರಬೇಕಾಗುತ್ತದೆ. ವಿವೇಕ ಮತ್ತು ವೈರಾಗ್ಯ ಎರಡೂ ಇದ್ದರೆ ಒಂದಕ್ಕೊಂದು ಪೂರಕವಾಗಿರುತ್ತವೆ. ಜನರೊಡನೆ ಬೆರೆಯುವ ವಿಷಯದಲ್ಲಿಯೂ ವಿವೇಕ-ವೈರಾಗ್ಯಗಳು ಜಾಗೃತವಾಗಿರಬೇಕಾಗುತ್ತವೆ. ಅನೇಕರು ದುಷ್ಟರಲ್ಲದಿದ್ದರೂ ತುಂಬ ವಿಷಯಾಸಕ್ತರಾಗಿರಬಹುದು. ಅವರೊಡನೆ ಅತಿಯಾಗಿ ಬೆರೆಯುವುದರಿಂದ ನಮ್ಮಲ್ಲಿಯೂ, ನಮಗೇ ಅರಿವಾಗದ ರೀತಿಯಲ್ಲಿ, ವಿಷಯಾಸಕ್ತಿ ಕ್ರಮೇಣ ಬೆಳೆಯುತ್ತ ಹೋಗುತ್ತದೆ. ಏನೂ ಆಗುತ್ತಿಲ್ಲ ಎಂದು ನಾವು ಭ್ರಮಿಸಬಹುದು. ನಾವು ನೇರವಾಗಿ ಮಾತ್ರವಲ್ಲದೆ, ಮೊಬೈಲ್ ಮೂಲಕ, ಬೇರೆ ಸಾಮಾಜಿಕ ಜಾಲತಾಣದ ಮೂಲಕ, ಪುಸ್ತಕಗಳ ಮೂಲಕವೂ ದುಷ್ಟರ ಸಂಗವನ್ನು ಮಾಡುತ್ತೇವೆ. ಈ ವಿಷಯದಲ್ಲಿಯೂ ನಾವು ಎಚ್ಚರಿಕೆಯಿಂದಿರಬೇಕಾಗುತ್ತದೆ. ನಾವೀಗ ಪ್ರಪಂಚದಲ್ಲಿರುವುದೆಂದರೆ, ಶ್ರೀರಾಮಕೃಷ್ಣರು ಕೊಡುವ ಉದಾಹರಣೆಯಂತೆ, ಕಾಡಿಗೆ ತುಂಬಿದ ಕೋಣೆಯಲ್ಲಿ ಇದ್ದಂತೆ. ಯಾವ ಕಡೆ ತಿರುಗಿದರೂ, ಸ್ವಲ್ಪ ಹರಿದಾಡಿದರೂ ವಿಷಯಾಸಕ್ತಿಯ ಕಾಡಿಗೆ ನಮ್ಮನ್ನು ಅಂಟಿಕೊಳ್ಳಬಹುದು.

## ಶುದ್ಧಭಕ್ತಿ

**ಶ್ರೀರಾಮಕೃಷ್ಣರು:** ''ಭಗವಂತನಲ್ಲಿ ಶುದ್ಧಭಕ್ತಿ ಗಳಿಸಿಕೊಳ್ಳದೆ ಇದ್ದರೆ, ಮುಕ್ತಿ ದೊರಕುವ ಹಾಗೆ ಇಲ್ಲ. ಭಗವಂತನ ಸಾಕ್ಷಾತ್ಕಾರ ಪಡೆದು ಸಂಸಾರದಲ್ಲಿದ್ದರೆ ಹೆದರಿಕೊಳ್ಳಬೇಕಾಗಿಲ್ಲ. ಆಗಾಗ ನಿರ್ಜನ ಪ್ರದೇಶದಲ್ಲಿದ್ದು ಸಾಧನೆ ಮಾಡಿ ಶುದ್ಧ ಭಕ್ತಿ ಗಳಿಸಿಕೊಂಡಿದ್ದೇ ಆದರೆ ಸಂಸಾರದಲ್ಲಿದ್ದರೂ ಹೆದರಿಕೊಳ್ಳಬೇಕಾಗಿಲ್ಲ.. ಚೈತನ್ಯದೇವನಿಗೆ ಸಂಸಾರಸ್ಥ ಭಕ್ತರೂ ಇದ್ದರು. ಅವರು ಸಂಸಾರ ದಲ್ಲಿ ಹೆಸರಿಗೆ ಮಾತ್ರ ಇರುತ್ತಿದ್ದರು, ಅನಾಸಕ್ತರಾಗಿ ಇರುತ್ತಿದ್ದರು.''

ಹಿಂದೆ ಶ್ರೀರಾಮಕೃಷ್ಣರು ವಿವೇಕ-ವೈರಾಗ್ಯದಿಂದ ಸಾಕ್ಷಾತ್ಕಾರ ಎಂದಿದ್ದರು. ಈಗ ಶುದ್ಧಭಕ್ತಿಯನ್ನು ಸೇರಿಸುತ್ತಿದ್ದಾರೆ. ಶುದ್ಧಭಕ್ತಿ ಎಂದರೇನು? ಬೇರೆ ಕಡೆ ಮನಸ್ಸಿಲ್ಲದ ಭಕ್ತಿ – ದೇವರಲ್ಲದೆ ಇನ್ನಾವುದೂ ಬೇಡ ಎಂಬ ನಿಲುವು.

**ಅನನ್ಯಾಶ್ಚಿಂತಯಂತೋ ಮಾಂ ಯೇ ಜನಾಃ ಪರ್ಯುಪಾಸತೇ ।**
**ತೇಷಾಂ ನಿತ್ಯಾಭಿಯುಕ್ತಾನಾಂ ಯೋಗಕ್ಷೇಮಂ ವಹಾಮ್ಯಹಮ್ ॥**

''ಯಾವ ಜನರು ಬೇರೇನನ್ನೂ ಚಿಂತಿಸದೆ ನನ್ನನ್ನೇ ಉಪಾಸಿಸುತ್ತಾರೋ ನಿತ್ಯಯುಕ್ತರಾದ ಅವರ ಯೋಗಕ್ಷೇಮವನ್ನು ನಾನು ನೋಡಿಕೊಳ್ಳುತ್ತೇನೆ'' *(೯.೭೭)* ಎಂದು ಭಗವದ್ಗೀತೆಯಲ್ಲಿ ಶ್ರೀಕೃಷ್ಣನು ಭರವಸೆ ಕೊಟ್ಟಿದ್ದಾನೆ. ಕೇವಲ ವಿವೇಕ-ವೈರಾಗ್ಯವಿದ್ದರೆ ಸಾಲದು, ಭಕ್ತಿಯೂ ಬೇಕು ಎಂಬುದು ಶ್ರೀರಾಮಕೃಷ್ಣರ ಅಭಿಪ್ರಾಯ. ಕೆಲವರಲ್ಲಿ ವೈರಾಗ್ಯವಿರುತ್ತದೆ, ಅವರಲ್ಲಿ ಪ್ರಪಂಚಾಸಕ್ತಿಯೂ ಇರುವುದಿಲ್ಲ, ಭಗವದಾಸಕ್ತಿಯೂ

ಇರುವುದಿಲ್ಲ. ಇಂಥವರು ಭಾವಶೂನ್ಯರಾಗಿರುತ್ತಾರೆ. ಲಿನ್ ಯುಟಾಂಗ್ ಎನ್ನುವವರು 'Importance of Living' ಎಂಬ ತಮ್ಮ ಗ್ರಂಥದಲ್ಲಿ ನಾಸ್ತಿಕನಾದ ಒಬ್ಬ ಸಾಧುವಿನ ಕಥೆ ಹೇಳುತ್ತಾರೆ. ಅವನಿಗೆ ಮನೆಯೂ ಇಲ್ಲ, ಸಂಸಾರವೂ ಇಲ್ಲ, ಹಣವೂ ಇಲ್ಲ. ಸುಮ್ಮನೆ ಪರಿವ್ರಾಜಕನಂತೆ, ಸಿಕ್ಕಿದ್ದನ್ನು ತಿನ್ನುತ್ತ, ಜಾಗವಿದ್ದಲ್ಲಿ ಮಲಗಿ ನಿದ್ರಿಸುತ್ತ, ಜೀವನ ನಡೆಸುತ್ತಿದ್ದ. ಇಂತಹ ವೈರಾಗ್ಯದಿಂದ ಏನು ಪ್ರಯೋಜನ? ವಿವೇಕ-ವೈರಾಗ್ಯದ ಗುರಿಯೇ ಭಗವಂತನನ್ನು ಪಡೆಯುವುದು. ಅದಕ್ಕಾಗಿಯೇ ಶ್ರೀರಾಮಕೃಷ್ಣರು ಭಗವದ್‌ಭಕ್ತಿಯನ್ನೂ ಸೇರಿಸುತ್ತಾರೆ.

### ದುರ್ಗಾಪೂಜೆಯ ಸಂಬಂಧವಾಗಿ

ಇನ್ನೊಂದು ದಿನ, ದುರ್ಗಾಪೂಜೆಯ ಸಂದರ್ಭ. ಕೇಶವ ಚಂದ್ರಸೇನರ ಮನೆಯಲ್ಲಿ ದುರ್ಗಾಮಹೋತ್ಸವ ನಡೆದಿತ್ತು, ಹಾಗೂ ಮಾಸ್ಟರ್ ಮಹಾಶಯರು ಅದರಲ್ಲಿ ಭಾಗವಹಿಸಿದ್ದರು. ಅಲ್ಲಿ ಕೇಶವಸೇನರಿಂದ ಕೇಳಿದ ದುರ್ಗಾಪೂಜೆಯ ವ್ಯಾಖ್ಯಾನವನ್ನು ಶ್ರೀರಾಮಕೃಷ್ಣರಿಗೆ ಹೇಳುತ್ತಿದ್ದಾರೆ:

''ಕೇಶವಸೇನರ ಮನೆಯಲ್ಲಿ ಬೆಳಗಿನಿಂದ ಹಿಡಿದು ಹತ್ತು ಹನ್ನೊಂದು ಘಂಟೆಯವರೆಗೆ ದಿನವೂ ಉಪಾಸನೆ ನಡೆಯಿತು. ಈ ಉಪಾಸನೆಯ ಸಮಯದಲ್ಲಿ ಅವರು ದುರ್ಗಾಪೂಜೆಯ ಸಂಬಂಧವಾಗಿ ವ್ಯಾಖ್ಯಾನ ಮಾಡಿದರು. ಅವರು ಹೇಳಿದರು: 'ಸಾಕ್ಷಾತ್ಕಾರ ಮಾಡಿಕೊಳ್ಳಲು ಸಾಧ್ಯವಾದರೆ, ಅಂದರೆ ಭಗವತಿ ದುರ್ಗೆಯನ್ನು ಹೃದಯಮಂದಿರದಲ್ಲಿ ಪ್ರತಿಷ್ಠಾಪನೆ ಮಾಡಲು ಸಾಧ್ಯವಾದರೆ ಲಕ್ಷ್ಮಿ, ಸರಸ್ವತಿ, ಕಾರ್ತಿಕೇಯ, ಗಣೇಶ ಇವರೆಲ್ಲ ತಾವಾಗಿಯೇ ಅಲ್ಲಿಗೆ ಬರುತ್ತಾರೆ. ಲಕ್ಷ್ಮಿ ಎಂದರೆ ಐಶ್ವರ್ಯ, ಸರಸ್ವತಿ ಎಂದರೆ ಜ್ಞಾನ, ಕಾರ್ತಿಕೇಯ ಎಂದರೆ ಪರಾಕ್ರಮ, ಗಣೇಶ ಎಂದರೆ ಸಿದ್ಧಿ. ಭಗವತಿಯನ್ನು ಸಾಕ್ಷಾತ್ಕಾರ ಮಾಡಿಕೊಂಡಿದ್ದೇ ಆದರೆ ಇವೆಲ್ಲ ತಾವಾಗಿಯೇ ದೊರೆಯುತ್ತವೆ.' ''

ಶ್ರೀರಾಮಕೃಷ್ಣರಿಗೆ ಈ ವ್ಯಾಖ್ಯಾನ ಇಷ್ಟವಾಗಲಿಲ್ಲ. ಅಸಮಾಧಾನದಿಂದ ಅವರು 'ಮ' ಅವರಿಗೆ ಹೇಳಿದರು: ''ನೀನು ಸುಮ್ಮನೆ ಅಲ್ಲಿಗಿಲ್ಲಿಗೆ ಅಲೆಯಬೇಡ. ಇಲ್ಲಿಗೇ ಬರುತ್ತಿರು. ಯಾರು ಅಂತರಂಗಿಗಳೋ ಅವರು ಕೇವಲ ಇಲ್ಲಿಗೇ ಬರುತ್ತಾರೆ. ನರೇಂದ್ರ, ಭವನಾಥ, ರಾಖಾಲ ಇವರು ನನ್ನ ಅಂತರಂಗ ಭಕ್ತರು. ಇವರು ಸಾಮಾನ್ಯ ವ್ಯಕ್ತಿಗಳಲ್ಲ. ನೀನು ಒಂದು ದಿನ ಇವರಿಗೆ ಊಟ ಹಾಕು.''

ದುರ್ಗಾರಾಧನೆಯಿಂದ ಲಕ್ಷ್ಮೀ ಮುಂತಾದವರು ಒಲಿಯುವುದಿಲ್ಲ, ಅವರನ್ನು ತ್ಯಜಿಸಿದರೆ ದೇವಿಯು ಒಲಿಯುತ್ತಾಳೆ. ಲಕ್ಷ್ಮೀ ಎಂದರೆ ಸಂಪತ್ತು, ಇದನ್ನು ತ್ಯಜಿಸಬೇಕು. ಇದು ಲಕ್ಷ್ಮಿಗೂ ಇಷ್ಟ, ಸಂಪತ್ತನ್ನು ತ್ಯಜಿಸಿದರೇ ಲಕ್ಷ್ಮಿಯ ಅನುಗ್ರಹವಾಗುವುದು. ಒಬ್ಬ ಭಕ್ತನಿದ್ದ, ತುಂಬ ಪ್ರಾಮಾಣಿಕ. ಆದರೆ ಅವನಲ್ಲಿ ಇನ್ನೂ ಹಣದ ಆಸೆ ಇತ್ತು. ಅವನು ಲಕ್ಷ್ಮಿಯನ್ನು ಕುರಿತು ಕಠಿಣ ತಪಸನ್ನಾಚರಿಸಿದ. ಎಷ್ಟೇ ವರ್ಷ ತಪಸ್ಸು ಮಾಡಿದರೂ ಲಕ್ಷ್ಮಿ ಒಲಿಯಲಿಲ್ಲ. ಹೀಗೆ ತಪಸ್ಸು ಮಾಡುತ್ತಿದ್ದಂತೆ ಅವನಲ್ಲಿದ್ದ ಧನದಾಸೆ ದಹನವಾಗಿ ಹೋಯಿತು. ಆಗ ಒಂದು ದಿನ ಲಕ್ಷ್ಮಿ ಅವನ ಮುಂದೆ ಪ್ರತ್ಯಕ್ಷವಾದಳು. ಭಕ್ತನಿಗೆ ಆಶ್ಚರ್ಯ: ''ನಾನು ನಿನ್ನನ್ನು ಬಯಸಿದ್ದಾಗ ನೀನು ಒಲಿಯಲಿಲ್ಲ. ಈಗ ನನಗೆ ನೀನು ಬೇಡವಾದಾಗ ಪ್ರತ್ಯಕ್ಷವಾಗಿದ್ದೀಯೆ! ಇದರರ್ಥವೇನು?'' ಎಂದು ಕೇಳಿದ. ಲಕ್ಷ್ಮಿ ಹೇಳಿದಳು: ''ನೀನೋರ್ವ ಪ್ರಾಮಾಣಿಕ ಸಾಧಕ. ಮೊದಲೇ ನಾನು ಪ್ರತ್ಯಕ್ಷವಾಗಿದ್ದರೆ ನೀನು ಧನದಾಸೆಗೆ ಒಳಗಾಗಿ ಆಧ್ಯಾತ್ಮಿಕ ಮಾರ್ಗದಿಂದ ದೂರವಾಗುತ್ತಿದ್ದೆ. ಅದಕ್ಕಾಗಿಯೇ ನಿನಗೆ ಧನದಾಸೆ ನಾಶವಾದ ಮೇಲೆ ನಾನು ತೋರಿಸಿಕೊಂಡಿರುವುದು. ನಿನಗೆ ಶುಭವಾಗಲಿ'' ಎಂದು ಹರಸಿ ಕಣ್ಮರೆಯಾದಳು.

ಸರಸ್ವತಿಯು ಜ್ಞಾನದೇವತೆ. ನಾವು ಪಾಂಡಿತ್ಯಾಭಿಮಾನವನ್ನು ಬಿಟ್ಟಾಗಲೇ ದೇವಿಯ ಅನುಗ್ರಹವಾಗುವುದು. ಜ್ಞಾನವೆಂದರೆ ಚಿತ್ತವೃತ್ತಿಗಳು. ಎಲ್ಲ ಚಿತ್ತವೃತ್ತಿಗಳ ನಿರೋಧವಾದಾಗಲೇ ದೇವಿಯ ಪಾರಮಾರ್ಥಿಕ ಸತ್ಯದ ಅನುಭವವಾಗುವುದು. ಎಲ್ಲ ಜ್ಞಾನವನ್ನೂ ಮೀರಿಹೋಗಬೇಕು.

ಕಾರ್ತಿಕೇಯ ಪರಾಕ್ರಮವನ್ನು ಸೂಚಿಸುತ್ತಾನೆ. ಪರಾಕ್ರಮವೆಂದರೆ ಪ್ರಭುತ್ವವನ್ನು, ಅಧಿಕಾರವನ್ನು ಗಳಿಸುವುದು. ಅಧಿಕಾರಕ್ಕಾಗಿ ಹೋರಾಡುವುದನ್ನು ನಿಲ್ಲಿಸಿ, ಆಧ್ಯಾತ್ಮಿಕ ಸಾಧನೆಯಲ್ಲಿ ನಮ್ಮ ಪರಾಕ್ರಮವನ್ನು ಮೆರೆಯಬೇಕು. ಚಿತ್ತ-ವೃತ್ತಿಗಳ ವಿರುದ್ಧ ನಾವು ಹೋರಾಡಬೇಕು. ಹಾಗೆಯೇ ಸಿದ್ಧಿಗಳನ್ನು ಅನುಗ್ರಹಿಸಲು ಬಂದಾಗ, ಅವುಗಳು ಬೇಡವೆಂದು ನಾವು ಹೇಳಿದರೆ ಅವನಿಗೇ ಸಂತೋಷವಾಗುತ್ತದೆ, ಮತ್ತು ತನ್ನ ಪರಮಾರ್ಥ ರೂಪವನ್ನು ನಮ್ಮ ಅನುಭವಕ್ಕೆ ಬರುವಂತೆ ಮಾಡುತ್ತಾನೆ. ಹೀಗೆ ನಾವು ಇವೆಲ್ಲವನ್ನೂ ತ್ಯಜಿಸಿದಾಗ ಮಹಿಷಾಸುರನ, ಅಂದರೆ ಎಲ್ಲ ಸಂಸ್ಕಾರಗಳ ವಧೆಯಾಗುತ್ತದೆ. *(ಮುಂದುವರಿಯುವುದು)*

> ''ಭಗವಂತನ ನಾಮಭಜನೆ ಮಾಡುತ್ತಾ ಸಂಯಮ ತನ್ನಷ್ಟಕ್ಕೆ ತಾನೆ ಉಂಟಾಗುತ್ತದೆ. ದೇವರ ಹೆಸರಿನಲ್ಲಿ ಎಂತಹ ಶಕ್ತಿ ಇದೆ ಎಂದರೆ ಅಂತರಿಂದ್ರಿಯ ಬಹಿರಿಂದ್ರಿಯ ಎಲ್ಲ ಸಂಯಮವಾಗಿಬಿಡುತ್ತದೆ. ಆದರೆ ತುಂಬಿದ ಪ್ರೇಮದಿಂದ ನಾಮಜಪ ಮಾಡಬೇಕು. ಯಾವ ರೀತಿಯಿಂದಲಾದರೂ ಆತನ ಪರವಾಗಿ ಅಕ್ಕರೆ ಮೂಡಿತು ಎಂದರೆ ಸಾಕೇ ಸಾಕು. ಆಮೇಲೆ ಏನೂ ಚಿಂತೆ ಮಾಡಬೇಕಿಲ್ಲ; ಬಹುಬೇಗನೆ ಆತನ ಬಳಿಗೆ ಮುಂದುವರಿಯಬಹುದು. ಅವನು ತನ್ನವನೆ ಎಂಬ ಬೋಧೆ ಉಂಟಾಯಿತೆಂದರೆ ಸಾಕು, ನಿಶ್ಚಿಂತೆಯಿಂದ ಇರಬಹುದು.''
>
> — ಸ್ವಾಮಿ ಶಿವಾನಂದ